ಅಧ್ಯಕ್ಷರು : ನಿಮಗೆ ಸಂಬಂಧಪಟ್ಟ ಪ್ರಶ್ನೆಗಳು ಮುಂದೆ ಈ ಸದನದಲ್ಲಿ ಬರುವ ದಿನದಂದು ಇದನ್ನು ತೆಗೆದುಕೊಳ್ಳಬಹುದು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಅಲ್ಲಿ ಬಾರ್ 7-8 ವರ್ಷಗಳಿಂದ ನಡೆಯುತ್ತಿದೆ. ಆದ್ದರಿಂದ ಇದನ್ನು ಇನ್ನು 7-8 ದಿವಸಗಳಲ್ಲಿ ಸರಿಪಡಿಸುತ್ತೀರಾ?

ಅಧ್ಯಕ್ಷರು 7-8 ವರ್ಷಗಳಿಂದ ನಡೆಯುತ್ತಿರುವುದನ್ನು 7-8 ದಿವಸಗಳಲ್ಲಿ ಸರಿಪಡಿಸುವುದಕ್ಕಾಗುತ್ತದೆಯೇ? ಕನಿಷ್ಟ ಪಕ್ಷ 7-8 ವರ್ಷಗಳಾದರೂ ಬೇಕಾಗುತ್ತದೆ.

ಶ್ರೀ ಎಸ್. ಹೆಚ್ ಕೌಜಲಗಿ ; ಕೃಷಿತ ಭವನವನ್ನು ಯಾವ ಉದ್ದೇಶಕ್ಕಾಗಿ ಕೂಡಲಾಯಿತು? ಯಾವ ಷರತ್ತಿಗೆ ಒಳಪಟ್ಟ ಕೂಡಲಾಯಿತು? ಈಗ ಅಲ್ಲಿ ನಡೆಯುತ್ತಿರುವುದು ಏನು? ಇದು ಬಹಳ ಮುಖ್ಯ?

ಅಧ್ಯಕ್ಷರು : ಕೌಜಲಗಿರಿಯವರೇ, ಈ ಪ್ರಶ್ನೆ ಮುಂದಿನ ವಾರ ಬರುತ್ತದೆ.

ಈಗ ಪ್ರಶ್ನೋತ್ತರ ಮುಗಿಯುತು.

ಶ್ರೀಮತಿ ಮೋಟಮ್ಮ : ನನ್ನದು ಮತ್ತು ಸುಮಾ ವಸಂತ ಅವರದ್ದು ಪ್ರಶ್ನೆ ಇದೆ.

ಚುಕ್ಕೆಗುರುತ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಜಿ. ಪುಟ್ಟಸ್ವಾಮಿ ಗೌಡ : (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 3-9-91ರ ಲಿಖಿತ ಮೂಲಕ ಉತ್ತರಿಸುವ 21ನೇ ಪಟ್ಟಿಯಲ್ಲಿರುವ ಪ್ರಶ್ನೆಗಳ ಪೈಕಿ 43ನೇ ಚುಕ್ಕೆ ಗುರುತಿಲ್ಲದ ಪ್ರಶ್ನೆಯನ್ನು ಬಿಟ್ಟು ಇತರ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಕಬ್ಬಿನ ಮೇಲಿನ ತೆರಿಗೆಯ ಆದಾಯ

2287 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರು ಒಂದು ಎಕರೆಯಲ್ಲಿ ಸರಾಸರಿ ಮೂವತ್ತು ಟನ್ ಕಬ್ಬು ಬೆಳೆಯುವುದರಿಂದ ರಾಜ್ಯ ಸರ್ಕಾರಕ್ಕೆ ಬರುವ ತೆರಿಗೆಯ ಆದಾಯ ಎಷ್ಟು.

ಆ) ಒಂದು ಎಕರೆ ಕಬ್ಬು ಬೆಳೆಯುವುದರಿಂದ ಕೇಂದ್ರ ಸರ್ಕಾರಕ್ಕೆ ಸರಾಸರಿ 30 ಟನ್‌ಗಳಿಗೆ ಬರುವ ತೆರಿಗೆಯ ಮೊತ್ತವೆಷ್ಟು?

ಇ) ಈ ಆದಾಯದಲ್ಲಿ ಶೇಕಡಾ 1 ರೈತರ ಹೊಲಗಳಿಗೆ ಹಾದು ಹೋಗುವ ರಸ್ತೆಗಳ ಅಭಿವೃದ್ಧಿಗಾಗಿ ಖರ್ಚು ಮಾಡಲು ಸರ್ಕಾರಕ್ಕೆ ಸಾಧ್ಯವಿಲ್ಲವೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು)

ಅ) ಒಂದು ಎಕರೆಗೆ 30ಟನ್ ಕಬ್ಬಿನಂತೆ ಪ್ರತಿ ಎಕರೆಯಿಂದ ಸರ್ಕಾರಕ್ಕೆ ಬರುವ ಖರೀದಿ ತೆರಿಗೆಯು ರೂ.475.20 (ಸಕ್ಕರೆ ಕಾರ್ಖಾನೆಗಳು ಉಳಿಸಿಕೊಳ್ಳುವ ಸಬ್ಸಿಡಿ ಹಣ ಹೊರತುಪಡಿಸಿ)

ಆ) ಎಕ್ಸೈಸ್ ಶುಲ್ಕ ರೂ.4110-00 ವಿವರಗಳು ಈ ಕೆಳಕಂಡಂತಿವೆ:

1 ಲೆವಿ ಸಕ್ಕರೆ ಪ್ರತಿ ಟನ್‌ಗೆ

ರೂ. 52.00 ರಂತೆ ರೂ.1560.00

2. ಮುಕ್ತ ಸಕ್ಕರೆ ಪ್ರತಿಟನ್‌ಗೆ ರೂ.85.00 ರಂತೆ ರೂ.2550.00

ಇ) ಇದನ್ನು ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ ಪರಿಶೀಲಿಸಲಾಗುವುದು.